**ರಂಗ:** ಚಂದ್ರು, ಒಂದು ವಿಷಯ ಗೊತ್ತಾ, ನ್ಯಾಯಾಧೀಶರು ಕೂಡ ಹೆಂಡತಿಗೆ ಹೆದರುತ್ತಾರಂತೆ!
**ಚಂದ್ರು:** ಹೌದು, ಯಾರಿಗೇ ಆಗಲಿ ಅರ್ಥವಾಗದೆ ಇರುವುದರ ಬಗ್ಗೆ ಯಾವಾಗಲೂ ಭಯ, ಹೆದರಿಕೆ ಇದ್ದದ್ದೆ!

***

**ಆತ:** ಕೆಲವು ಪದಾರ್ಥಗಳ ಮೇಲೆ ಆರೋಗ್ಯಕ್ಕೆ ಹಾನಿಕರ ಅಂತ ಬರೆದಿದ್ದರೂ ಉಪಯೋಗಿಸುತ್ತಲೇ ಇರುತ್ತಾರಲ್ಲ?
**ಈತ:** ಹಿರಿಯರು 'ಪ್ರತ್ಯಕ್ಷವಾಗಿ ಕಂಡರೂ ಪ್ರಮಾಣೀಕರಿಸಿ ನೋಡಬೇಕು' ಅಂತ ಹೇಳಿದ್ದಾರಲ್ಲ ಅದಕ್ಕೆ!

***

**ಸಂತೋಷ:** ಅಭಿ, ಮಹಾಪುರುಷರು ಅನ್ನಿಸಿಕೊಂಡಿರುವ ಹಿಂದಿನವರಿಗೆ ಬಹಳ ಟೈಮ್ ಸೆನ್ಸ್ ಇತ್ತಂತೆ?
**ಅಭಿ:** ಹೌದು, ನಾನು ಕೂಡ ಅವರ ದಾರಿಯಲ್ಲಿ ಅರ್ಧ ದಾರಿ ಕ್ರಮಿಸಿದ್ದೀನಿ!
**ಸಂತೋಷ:** ಅಂದರೆ?
**ಅಭಿ:** ನನ್ನ ಹತ್ತಿರ ಟೈಮ್ ಇದೆ, ಸೆನ್ಸ್ ಮಾತ್ರ ಇಲ್ಲ!

***

**ಪತಿ:** ನಿನಗೆ ಬೇರೆ ಕೆಲಸ ಇಲ್ಲವೆ? ಬೆಳಿಗ್ಗೆ ಬೆಳಿಗ್ಗೇನೆ ಅಲಂಕಾರ ಮಾಡಿಕೊಂಡಿದ್ದೀಯಲ್ಲ?
**ಪತ್ನಿ:** ರೀ, ಸುಮ್ಮನಿರಿ, ನನ್ನ ಫೋನ್ ಲಾಕ್ ಓಪನ್ ಮಾಡಬೇಕು, ಅದು ನನ್ನ ಮುಖದ ಗುರುತು ಹಿಡಿಯುತ್ತಿಲ್ಲ!

***

**ಗೌತಮ:** ಕಿಟ್ಟು, ಕೆಲ ಹುಡುಗರು ಸಿನಿಮಾ ಸೇರಿದ ಮೇಲೆ ನಿಜ ಜೀವನದ ಅರ್ಥವನ್ನೇ ಕಳೆದುಕೊಂಡು ಬಿಡುತ್ತಾರೆ ಕಣೊ!
**ಕಿಟ್ಟು:** ಏಕೆ, ಹೀಗೆ ಹೇಳ್ತಾ ಇದ್ದೀಯಲ್ಲ?
**ಗೌತಮ:** ಇನ್ನೇನು ಕಿಟ್ಟು, ಆ ಹುಡುಗನ ತಾಯಿ ಇತ್ತೀಚೆಗೆ ನಿಧನ ಹೊಂದಿದ್ದರು. ನಿರ್ದೇಶಕರು ಬಂದು 'ಆ್ಯಕ್ಷನ್' ಎಂದ ಮೇಲೆಯೇ ಅವನು ಅತ್ತಿದ್ದು!

***

**ಪತಿ:** ಕಮಲ ನಾನೇನಾದರೂ ಸತ್ತು ಹೋದರೆ ಮುಂದೇನು ಮಾಡ್ತೀಯಾ?
**ಕಮಲ:** ಹಾಗೇನಾದರೂ ಆದರೆ ನನ್ನ ತಂಗಿ ಜೊತೆ ಇರುತ್ತೇನೆ. ಆಯ್ತು, ನಿಮಗಿಂತ ಮುಂಚೆ ಮೊದಲು ನಾನೇ ಸತ್ತು ಹೋದರೆ ನೀವೇನು ಮಾಡ್ತೀರಿ?
**ಪತಿ:** ನಾನೂ ನಿನ್ನ ತಂಗಿ ಜೊತೆ ಇರುತ್ತೇನೆ!

***

**ಶಿಕ್ಷಕ:** ವಿದ್ಯಾರ್ಥಿಗಳೇ, ಈ ಸಲ ಪ್ರವಾಸಕ್ಕೆ ನೀವೆಲ್ಲ ಬರುತ್ತೀರಿ ತಾನೆ?
**ವಿದ್ಯಾರ್ಥಿಗಳು:** ನಾವೆಲ್ಲ ಖಂಡಿತ ಬರುತ್ತೇವೆ ಸಾರ್, ಆದರೆ ಒಂದು ಕಂಡೀಷನ್.
**ಶಿಕ್ಷಕ:** ಏನದು?
**ವಿದ್ಯಾರ್ಥಿಗಳು:** ಪ್ರವಾಸಕ್ಕೆ ಬಂದಾಗ ಅಲ್ಲಿ ನೀವು ಕ್ಲಾಸ್ ತೆಗೆದುಕೊಳ್ಳೇನೆ ಬನ್ನಿ ಎನ್ನಬಾರದು ಸರ್!

***

**ಪತಿ:** ಏನೇ, ಆ ಮೀನಾಕ್ಷಿ ತೆಗೆದುಕೊಂಡಿರುವಂಥದ್ದೇ ಸೀರೆ ಬೇಕು ಅಂತ ಹಟ ಹಿಡಿದಿರುವೆಯಲ್ಲ?
**ಪತ್ನಿ:** ಹೌದು, ಅವಳ ಗಂಡನಂಥ ಗಂಡನನ್ನು ಪಡೆಯೋದಕ್ಕೆ ಪುಣ್ಯ ಮಾಡಿಲ್ಲ. ಸೀರೆನಾದ್ರೂ ತೆಗೆದುಕೊಳ್ಳೋಣ ಅಂತ!

***

**ಮಗ:** ಅಪ್ಪ, ತಬಲ ತಂದುಕೊಡಿ ಅಂದ್ರೂ ಏಕೆ ತಂದು ಕೊಡ್ತಾ ಇಲ್ಲ?
**ತಂದೆ:** ತಬಲದ ಶಬ್ದ ನನಗೆ ಆಗೋಲ್ಲ.
**ಮಗ:** ಅಪ್ಪ, ನಿನಗೆ ಇದರಿಂದ ಏನೂ ತೊಂದರೆ ಆಗೋದಿಲ್ಲ, ನೀನು ಮಲಗಿದ ಮೇಲೆ ಬಾರಿಸ್ತೀನಿ!

***

**ಯುವತಿ:** ಜ್ಯೋತಿಷಿಗಳೇ, ನನ್ನ ಅದೃಷ್ಟ ಹೇಗಿದೆ?
**ಜ್ಯೋತಿಷಿ:** ನಿನ್ನ ಅದೃಷ್ಟ ಬಹಳ ಚೆನ್ನಾಗಿದೆಯಮ್ಮ, ನೀನು ಕಿಟ್ಟುವನ್ನು ಮದುವೆಯಾದರೆ, ನಾಣಿ ಅದೃಷ್ಟವಂತನಾಗುತ್ತಾನೆ. ನಾಣಿಯನ್ನು ಮದುವೆಯಾದರೆ ಕಿಟ್ಟು ಅದೃಷ್ಟವಂತನಾಗುತ್ತಾನೆ!

***

**ಅಶೋಕ:** ಶ್ರೀನಿಧಿ, ನೀನು ಪ್ರೇಮಿಗಳ ದಿನಕ್ಕೆ ಕವಿತೆ ಬರೆದಿದ್ದೇನೆ ಅಂತ ಹೇಳಿದಿಯಲ್ಲ, ಹೇಳು ಕೇಳೋಣ!
**ಶ್ರೀನಿಧಿ:** ಫೋನ್ ಮಾಡಬೇಡಿ ಡಿಯರ್, ಫಾದರ್ ಇರ್ತಾರೆ ನಿಯರ್, ಮಾತನಾಡುವುದಕ್ಕಾಗುವುದಿಲ್ಲ ಕ್ಲಿಯರ್, ವಿಷಯ ಗೊತ್ತಾದರೆ ಫಿಯರ್, ಮೆಸೇಜ್ ಮಾಡು ಡಿಯರ್, ನಿನ್ನ ಜೊತೆ ಇರ್ತೀನಿ ಫಾರ್ ಎವರ್!

***

**ರಾಜು:** ಕಿಟ್ಟು ಏಕೆ ಬಹಳ ಬೇಜಾರಲ್ಲಿದ್ದೀಯ?
**ಕಿಟ್ಟು:** ಆಶಾ ಫೋನ್ ಮಾಡಿ ಇವತ್ತು ಮನೆಯಲ್ಲಿ ಯಾರೂ ಇರುವುದಿಲ್ಲ ಬನ್ನಿ ಅಂತ ಹೇಳಿದ್ಲು !
**ರಾಜು:** ಇದು, ಸಂತೋಷದ ಸಮಾಚಾರ ತಾನೆ?
**ಕಿಟ್ಟು:** ಬರೀ ಸಂತೋಷ ಅಷ್ಟೆ! ಅವಳ ಮನೆಗೆ ಹೋದಾಗ ಬೀಗ ಹಾಕಿತ್ತು!

***

**ನಾಗೇಶ:** ವಿನಯ, ಗಣಪತಿಯನ್ನು ಎಲ್ಲರೂ ಪೂಜಿಸುತ್ತಾರೆ, ಆದರೆ ಇಲಿಯನ್ನು ದ್ವೇಷಿಸುತ್ತಾರೆ.
**ವಿನಯ:** ನೀನು ಹೇಳುವುದು ನಿಜ, ದೊಡ್ಡವರ ಜೊತೆ, ಸಣ್ಣವರದು ಯಾವಾಗಲೂ ಕಿರಿಕಿರಿ ಆಗುವುದರಿಂದ!

***

**ಅಧಿಕಾರಿ:** ಈ ಮಾನಸಿಕ ಆಸ್ಪತ್ರೆಯಲ್ಲಿ ಎಲ್ಲ ರೋಗಿಗಳು ನಮಸ್ಕರಿಸಿದರು. ಒಬ್ಬ ಮಾತ್ರ ನಮಸ್ಕಾರ ಮಾಡಲಿಲ್ಲ ಡಾಕ್ಟ್ರೆ?
**ಡಾಕ್ಟರ್:** ಈಗ ಅವನ ಮಾನಸಿಕ ಪರಿಸ್ಥಿತಿ ಸರಿಯಾಗಿದೆ ಸರ್!

***

**ಸೋಮು:** ಪ್ರಾಣೇಶ, ನಿನಗೆ ಗೊತ್ತಾ, ಮದುವೆಯಾಗಿರುವ ಮಹಿಳೆಯರು ಹೇಳುವ ಸುಳ್ಳು, 'ನಮ್ಮವರನ್ನು ಕೇಳ್ಬೇಕು' ಅಂತ!
**ಪ್ರಾಣೇಶ:** ಗಂಡಸರೇನು ಕಡಿಮೆ ಅಂತ ತಿಳಿದುಕೊಂಡಿದ್ದೀಯಾ, ಅವರು ಹೇಳುವ ಸುಳ್ಳು ಗೊತ್ತಾ? 'ಅವಳನ್ನು ಏನು ಕೇಳೋದು' ಅಂತ!

***

**ಅಭಿರಾಮ:** ಅನಂತ, ಮುಂದಿನ ಜನ್ಮ ಇದ್ದರೆ ನಾನು ನಾಯಿಯಾಗಿ ಹುಟ್ಟಬೇಕು ಅಂತ ಆಸೆ.
**ಅನಂತ:** ಏಕೆ ಇಂಥ ಆಸೆ?
**ಅಭಿರಾಮ:** ಅವಳು ಹೆದರುವುದು ನಾಯಿಗೆ ಮಾತ್ರ!

ಸಂಗ್ರಹ: ಶಂಕರೇಗೌಡ ತುಂಬಕೆರೆ, ಮಂಡ್ಯ

